ಈ ಕಡೆಯಿಂದ ಅಂಬವ್ವ, 'ಹಲೋ... ಹಲೋ...'

'ಹಾಂ ಹಲೋ... ಅಂಬವ್ವಾ, ಆರಾಮದ್ದೀಯಾ?'

'ಹೂನವಾ ಅರಾಮದೀನಿ' ಬಿಕ್ಕಳಿಸುತ್ತಾ ಕಣ್ಣೀರಿಟ್ಟಳು.

'ಏನಾತು?'

'ಹೊಲದಾಗ ದನಾ ಕಟ್ಟಿ ದಿನಾ ಬರಂಗ ಬರ್ತಿದ್ವಿ. ಇವತ್ ಬೆಳಿಗ್ಗೆ ಹೋಗಿ ನೋಡಿದ್ರ ದನಗಳು ಇಲ್ಲಮ್ಮಾ ಕಳುವಾಗ್ಯಾವು.'

'ಹೌದಾ! ಎರಡೆತ್ತು ಆಕಳ ಮತ್ತೇನು ಹೋಗ್ಯಾವ?'

'ಇಲ್ಲಮಾ ಅಷ್ಟ. ಎರಡೆತ್ತು ಆಕಳ. ಆಕಳ ಕರ ಹಂಗ ಬಿಟ್ಟು ಹೋಗ್ಯಾರ'

'ನಿಮ್ಮವ್ ಅಷ್ಟೆ ಹೋಗ್ಯಾವ ಇಲ್ಲ ಮತ್ಯಾರವ್ ಹೋಗ್ಯಾವ್ ಹಂಗ?'

'ಇಲ್ಲಮಾ ನಮ್ಮವಷ್ಟ ಹೋಗ್ಯಾವ'

'ಹೌದಾ! ಅಲ್ಲೆ ಎಲ್ಲೆರ ಮೇಯಾಕ ಹೋಗಿರ್ತಾವ್ ನೋಡ್ರಿ, ಹುಡಕ್ರಿ ಸರಿಯಾಗಿ'

'ಎಲ್ಲಾ ಕಡೆ ಹುಡಿಕೇವಿ, ದನಾನ ಮಕರಿ ರೋಡ್ವರಗೂ ಹೊಡಕೊಂಡ್ ಹೋಗಿ, ಅಲ್ಲಿಂದ ಗಾಡ್ಯಾಗ ಹಕ್ಯಂಡ್ ಹೋಗ್ಯಾರಮಾ'

'ಹೌದಾ! ನಿಮ್ಮ ಹೊಲದ ಬದಿಗೆ ಚೌಡವ್ವ ಅದಾಳಲ್ಲಿ, ಬನ್ನಿಮರ ಐತಿನೋಡ್ ಒಂದ್...'

'... ಹುನಮ್ಮಾ ಹೂಂ ಐತಿ... '

'ಹೂ ಅಕಿ ಬಾರಿ ಅಸವಾಲದಾಕಿ ಅದಾಳ. ಅಕೀಗೆ ಪ್ರತಿ ಶುಕ್ರುವಾರ ಎಲ್ಡ್ ಉದ್ದಿನಕಡ್ಡಿ ಹಚ್ಚಿ ಬೇಡಕರ್ರಿ ಬರ್ತಾವ್ ದನ ಎಲ್ಲ ಹೋಕ್ಯಾವ್, ಏನ್ ಹೆದರಬ್ಯಾಡ್ರಿ. ದನ ಬರ್ತಾವ್ ಅಲ್ಲಿ ಚೌಡವ್ವ ಅದಾಳ.. ಸರಿ ಇಡ್ಲಾ'

ಫೋನಿನ ಲೌಡ್ ಸ್ಪೀಕರ್‌ನಲ್ಲಿ ಸಂಭಾಷಣೆಯನ್ನು ಕೇಳಿಸಿಕೊಂಡ ನಿಂಗಪ್ಪ ಮುಂದೆ ತನ್ನ ಹೊಲದ ಒಡೆಯನಿಗೂ ಫೋನಿನಲ್ಲಿ ಸುದ್ದಿ ಮುಟ್ಟಿಸಿದ.

ಮಲ್ಲವ್ವಳಿಗೆ ಈಗ ರೊಟ್ಟಿಯ ಕರಕಲಾದ ವಾಸನೆ ಮೂಗಿಗೆ ಬಡಿಯತೊಡಗಿದು. ಧಡಗ್ಗನೆ ಓಡಿ ಬಂದು ಚುಂಚುಗದಿಂದ ಹಂಚಿಗೆ ಹತ್ತಿದ್ದ ರೊಟ್ಟಿ ಕೆಬರಿ ತೆಗೆದು, ಹಂಚಿಗೊಂದಿಷ್ಟು ನೀರು ಚಿಮುಕಿಸಿದಳು. ಚೊಸ್ಸನೆ ಆವಿಯ ಶಬ್ದದ ಜೊತೆಗೆ ಹಂಚು ತಣ್ಣಗಾಯಿತು. ಬಡಿದುಕೊಂಡ ಎರಡು ರೊಟ್ಟಿಯನ್ನು ಅರಬಿಗಿ ಗಂಟಾಕಿಕೊಂಡು ಹೊಲದ ಕಡೆಗೆ ಜಾಗ ಕಿತ್ತಳು ಮಲ್ಲವ್ವ. ಇತ್ತಕಡೆ ನಿಂಗಪ್ಪ ತನ್ನ ಪರಿಚಿತ ನಾಗನ ಗೌಡ್ರು, ಬೀರಪ್ಪ, ಜಯಣ್ಣ, ಸಿದ್ದಪ್ಪನಿಗೆ ಸುದ್ದಿ ಮುಟ್ಟಿಸಿದ. ಅಂಬವ್ವನ ಸಣ್ಣ ತಮ್ಮನಾದ ಸೀನನಿಗೂ ಸುದ್ದಿ ತಿಳಿದು ಹೊಲಕ್ಕೆ ಬಂದ.

'ಇಲ್‌ಬುಡು ನಿಂಗಪ್ಪ ಇಷ್ಟು ದಿನ ಕಳುವಾಗದವು ಈಗ್ಯಾಕ ಕಳುವಾಕವು ಬರ್ತಾವ್ ಬಿಡು ಸಂಜೀಕ್ ಎಲ್ಲೀಗ್ ಹೊಕ್ಕಾವ್' ಎಂದು ನಾಗನಗೌಡ್ರು ನಿಂಗಪ್ಪನಿಗೆ ಕೊಂಚ ಧೈರ್ಯ ತುಂಬುವಂತೆ ಹೇಳಿದರು. ಹೊಲದ ಜಮೀನ್ದಾರ ಜಯಣ್ಣ, ನಿಂಗಪ್ಪನನ್ನು ಹೊಲದ ಎದುರಿಗಿನ ಪೊಲೀಸ್ ಠಾಣೆಗೆ ಕರೆದೊಯ್ದು ಕಂಪ್ಲೇಂಟ್ ಕೊಡಿಸಲು ಮುಂದಾದ. ಪೊಲೀಸರು ಸುದ್ದಿ ಕೇಳಿ ಅವಾಕ್ಕಾದರು. ಪಿಎಸ್‌ಐ ಇಲ್ಲದ ಕಾರಣ ಸ್ವಲ್ಪ ಹೊತ್ತು ಕಾಯುವಂತೆ ಹೇಳಿದರು. ಒಂದು ಗಂಟೆಯ ಬಳಿಕ ಬಂದ ಪಿಎಸ್‌ಐ ವಿವರಗಳನ್ನು ಕೇಳಲಾರಂಭಿಸಿದ. ಸರಿ ಕಂಪ್ಲೇಂಟ್ ಕೊಟ್ ಹೋಗ್ರಿ ವಿಚಾರಿಸ್ತೀನಿ ಎಂದರು. ನಿಂಗಪ್ಪ ಇದರಿಂದ ತನಗೆ ನ್ಯಾಯ ಸಿಗುತ್ತದೆಂಬ ನಂಬಿಕೆ ಬಿಟ್ಟು ಕಂಪ್ಲೇಂಟ್ಗೆ ಸಹಿ ಮಾಡಿ ಠಾಣೆಯಿಂದ ಹೊರಬಂದ.

ಬೀರಪ್ಪ, 'ಅಣಾ ಕಳೂ ಮಾಡಿದ ದನಾನ ಹಗಲು ಯಾರೂ ಸಾಗಸಲ್ಲ, ರಾತ್ರೀನ ಹೊಡ್ಕಂಡ್ ಸಾಗಸ್ತಾರ. ಇಲ್ಲೆ ಹತ್ರದಾಗ ಅಂದ್ರ ಹೊನ್ನಾಳಿ ಸಂತಿಗೆ ಹೊಡದಿರ್ತಾರ್ ನೋಡ್' ಎಂದ.

'ಹುಚ್ಚು ಸೂಳೆಮಗನ, ಕದ್ದು ಮಾರಿಬಿಡಾಕೇನ್ ಎತ್ತು ಅವ್ರವೇನ್ಲೆ? ಒಂದೆಲ್ಡ್ ವಾರ ಎಲ್ಲೆರ ಮನ್ಯಾಗ ಇಲ್ಲಾ ಹೊಲದಾಗ ಕಟ್ಟಾಕಿ, ಆಮ್ಯಾಲ ಸಣ್ಣಕ ಎಲ್ಲಿಗರ ಸಾಗಸ್ತಾರ ಅಷ್ಟ' ಎಂದು ನಾಗನಗೌಡ ಬೀರಪ್ಪನಿಗೆ ಪ್ರತಿವಾದ ಹೂಡಿದರು.

ನಿಂಗಪ್ಪನಿಗೆ ತಲೆ ಹನ್ನೆರಡಾಣೆ ಆಯಿತು. ಯಾರು ಏನೇ ಹೇಳಿದರೂ ಅದರತ್ತ ಗುಮಾನಿ ಹಿಡಿದು ಯೋಚಿಸುತ್ತಿದ್ದ.

'ಇಲ್ಲಣಾ ನಿನಗೆ ಹೊಲ ಬಿಡಸಬೇಕಂತಾ ಯಾರಾ ಹಿಂಗ್ ಪ್ಲಾನ್ ಮಾಡ್ಯಾರ ಅಂತ ಅನಸಕತ್ತೇತಿ ನನಿಗೆ' ಎಂದು ಬೀರಪ್ಪ ಮತ್ತೆ ನಿಂಗಪ್ಪನ ತಲೆಗೆ ಹುಳಬಿಟ್ಟ.

'ಅಣಾ.. ಇವೆಲ್ಲಾ ಆಗದ ಕೆಲಸಾ. ಬಾರಣ ತೇರಗಡ್ಡಿ ಸ್ವಾಮೇರ ಕಡೆ ಕಳುವಾದ ದನದ ಕೊಳ್ಳಾಗಿನ ಹಗ್ಗಾ ಕೊಟ್ರ ಇದ್ದಲ್ಲೀಗೆ ದನಾ ತರಸ್ತಾರಂತ' ಸಿದ್ದಪ್ಪ ಸೂಚಿಸಿದ.

'ಅಲ್ಲಲೆ ಎಬಡ ನನ್‌ಮಗನ ಹಗ್ಗನೂ ದನದ